**ಮರು ಪ್ರಮಾಣೀಕರಿಸಲಾದ ದಿನಾಂಕ : 10.02.2026.**

**<u>ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. N.C.A ವಕೀಲರಿಂದ</u> :-**

ವಾದಿ ನನ್ನ ಸಂಬಂಧಿಯಲ್ಲ. ನನ್ನ ಜಮೀನಿನ ಸರ್ವೆ ನಂಬರ್ ನನಗೆ ತಿಳಿದಿಲ್ಲ. ಅದು ಗ್ರಾಮ ಠಾಣಕ್ಕೆ ಬರುತ್ತದೆ. ಸ.ನಂ.10/1 ಪ್ರತಿವಾದಿಗೆ ಸೇರಿದ ಜಮೀನು ಎಂದರೆ ಸರಿ. ಸದರಿ ಆಸ್ತಿಯ ಜಮೀನಿನ ದಕ್ಷಿಣ ಭಾಗಕ್ಕೆ ವಾದಿಯ ಆಸ್ತಿ ಇದೆ ಎಂದರೆ ಸರಿ. ವಾದಿಯ ಮನೆಯ ಮೂಲೆಗೆ ನಮ್ಮ ಜಮೀನು ಬರುತ್ತದೆ ಎಂದರೆ ಸರಿ. ಮತ್ತೊಂದು ದಾವೆಯು ವಾದಿ ಹಾಗೂ ಪ್ರತಿವಾದಿಯ ನಡುವೆ ಇದ್ದು ಅದು ತಿಪಟೂರಿನ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದ್ದು ಅದರಲ್ಲಿ ಅಳತೆಯಾಗಿ ವರದಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನಿನ ಸರ್ವೆ ನಂಬರ್ಃ 10/2 ಎಂದರೆ ನನಗೆ ತಿಳಿದಿಲ್ಲ. ಆದರೆ ಅದು ನನ್ನ ಮನೆಯ ಪಕ್ಕದಲ್ಲಿ ಇರುತ್ತದೆ. ನಮ್ಮ ಮನೆಯಲ್ಲಿ ನಾನು ನಮ್ಮ ತಂದೆಯ ಕಾಲದಿಂದಲೂ ವಾಸವಿದ್ದೇನೆ. 2016 ನೇ ಇಸವಿಯಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟ ಹಾಗೇ ವಾದಿಯು ಅಳತೆಯನ್ನು ಮಾಡಿಸಿರುವ ಬಗ್ಗೆ ನನಗೆ ಮಾಹಿತಿ ಇದೆ. ಆ ಸಮಯದಲ್ಲಿ ಬೇಲಿಯಿಂದ 5½ ಅಡಿ ವಾದಿಯೇ ಒತ್ತುವರಿ ಮಾಡಿರುವುದಾಗಿ ತಿಳಿದು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನಿನ ವಿಸ್ತೀರ್ಣವು ಎಷ್ಟು ಎಂಬುದು ನನಗೆ ಗೊತ್ತಿಲ್ಲ ಹಾಗೂ ಅದರ ಚೆಕ್ಕುಬಂದಿಯು ನನಗೆ ಹೇಳಲು ಆಗುವುದಿಲ್ಲ. ಮಲ್ಲೇಶಯ್ಯನವರ ಜಮೀನಿಗೆ ಇರುವ ಚೆಕ್ಕುಬಂದಿಯು ಸರಿಯಾಗಿದ್ದು ಅದರ ಚೆಕ್ಕುಬಂದಿಯಿಂದ ಪೂರ್ವಕ್ಕೆ ಶಂಕರಮ್ಮ, ಪಶ್ಚಿಮಕ್ಕೆ ಮಲ್ಲೇಶಯ್ಯ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮಲ್ಲೇಶಯ್ಯ ಇರುತ್ತಾರೆ. ಈ ಚೆಕ್ಕುಬಂದಿಯ ಒಳಗಡೆ ಮಲ್ಲೇಶಯ್ಯನ ಜಮೀನು ಬರುತ್ತದೆ ಎಂದರೆ ಸರಿ. ವಾದಿಯ ಜಮೀನನ್ನು ಅಳತೆ ಮಾಡಿದ್ದೇ ಆದಲ್ಲಿ ನನ್ನ ಮನೆ 1 ಅಡಿ ವಾದಿಯ ಜಮೀನಿನ ಒಳಗೆ ಬರುತ್ತದೆ, ಆದ ಕಾರಣ ವಾದಿಯ ಪರವಾಗಿ ಸಾಕ್ಷಿಯನ್ನು ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಮನೆಯ ಉತ್ತರ ದಿಕ್ಕಿಗೆ ಮಲ್ಲೇಶಯ್ಯ ಮತ್ತು ಶಂಕರಮ್ಮ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ. ಅಂದಿನಿಂದಲೂ ಸಹ ಅವರಿಬ್ಬರೂ ಅದೇ ಮನೆಯಲ್ಲೇ ವಾಸ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ಹಾಗೇ ಸದರಿ ಜಮೀನಿನ ಒಳಗಡೆ ಇದ್ದ ಒಂದು ಹುಣಸೇ ಮರವು ಬಿದ್ದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಅದರ ಒಳಗಡೆ 4 ಬೇವಿನ ಮರವಿದ್ದು ಅದರಲ್ಲಿ ಒಂದು ಬಿದ್ದು ಹೋಗಿರುತ್ತದೆ. ಸದರಿ ಮರಗಳೆಲ್ಲವೂ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಅದು ವಾದಿಗೆ ಸೇರಿದಂತಹ ಮರಗಳಾಗಿರುತ್ತದೆ. ಸದರಿ

ಮರಗಳೆಲ್ಲವೂ ಪ್ರತಿವಾದಿಯ ಜಮೀನಿನಲ್ಲೇ ಇದ್ದು ಅದನ್ನು ಬಿಟ್ಟು ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ಅಳತೆಯನ್ನು ಮಾಡಲು ಬಂದಿದ್ದಂತಹ ಸಮಯದಲ್ಲಿ ನೀವು ಅಲ್ಲಿ ಇದ್ದು ಎಲ್ಲಾ ವಿಷಯಗಳು ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಸಹಿ/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**